ಮಾತನಾಡುವ ಈ ತಾಯಿ ಅಂತರಂಗದಲ್ಲಿ ಎಷ್ಟು ಮೃದುವಾಗಿದ್ದಾಳೆ! ಅವಳ ಹೃದಯದಲ್ಲಿ ಮಮತೆಯ ಸ್ಪಂದನವಿದೆ.

ದೀಪಕ ಆಟೋ ಹಿಡಿದು ಮನೆಗೆ ಬಂದಾಗ ಒಂಬತ್ತೂವರೆಯಾಗಿ ಹೋಗಿತ್ತು. ಆಶ್ಚರ್ಯವೆಂದರೆ ದಿನವೂ ಬೇಗ ಮಲಗುವ ದಂಪತಿ ಅವನಿಗಾಗಿ ಕಾಯುತ್ತ ಕುಳಿತಿದ್ದರು.

'ಯಾಕೆ ಮಗು, ಟ್ರೇನು ಲೇಟಾ?'

'ಹೌದು ಚಿಕ್ಕಪ್ಪ ಎರಡೂವರೆ ಗಂಟೆ ಲೇಟಾಗಿ ಬಂತು.'

'ನಿನ್ನಮ್ಮ ಇನ್ನೊಂದೆರೆಡು ದಿನ ತಮ್ಮೊಟ್ಟಿಗಿರಲು ತಡೆದಿರುವರೇನೋ, ಎಂದು ಕೊಂಡೆವು. ಸರಿ, ಸ್ನಾನ ಮಾಡಿ ಬಾ, ನಿನ್ನ ಚಿಕ್ಕಮ್ಮ ಅಡಿಗೆ ಮಾಡಿಟ್ಟುಕೊಂಡು ನಿನಗಾಗಿ ಕಾಯುತ್ತಿದ್ದಾಳೆ' ಅವನು ಸ್ನಾನ ಮುಗಿಸಿ ಬಂದಾಗ ಚಿಕ್ಕಮ್ಮ ಊಟಕ್ಕೆ ತಟ್ಟೆ ಇಟ್ಟು ಕಾಯುತ್ತಿದ್ದಳು. ಕೃತಜ್ಞತೆಯಿಂದ ಅವನ ಹೃದಯ ತುಂಬಿ ಬಂತು. ಏನು ಮಾತಾಡಬೇಕೆಂದು ತೋಚದೆ 'ನಿಮ್ಮ ದೀಪಾವಳಿ ಹೇಗಾಯಿತು ಚಿಕ್ಕಪ್ಪ?' ಕೇಳಿದ. 'ನಮ್ಮದೇನು ಮಗು, ದೀಪಾವಳಿ–ಹೋಳಿ ಎರಡೂ ಒಂದೇ. ನಿಮ್ಮದು ಹೇಗಾಯಿತು ಹೇಳು.'

'ಇಲ್ಲ ದೀಪೂ, ಈ ಸಾರೆ ನಮ್ಮ ದೀಪಾವಳಿ ಚೆನ್ನಾಗಿಯೇ ಆಯಿತು. ನಿನ್ನ ಚಿಕ್ಕಪ್ಪ ಪೂರಾ ಮೂರುನೂರು ರೂಪಾಯಿ ಸೋತು ಬಂದಿದ್ದಾರೆ.'

'ಅಂದರೆ! ನೀವು ಅಷ್ಟೊಂದು ಹಣವನ್ನು ಯಾವುದರಲ್ಲಿ ಸೋತಿರಿ ಚಿಕ್ಕಪ್ಪ?'

'ರಾತ್ರಿ ಎಲ್ಲ ಜೂಜಾಡಿದ್ದಾರೆ!'

'ಚಿಕ್ಕಪ್ಪ, ನೀವು ಜೂಜಾಡುತ್ತೀರಾ?'

'ದೀಪಾವಳಿಯ ಸಮಯದಲ್ಲಿ ಮಾತ್ರ ಆಡುತ್ತೇನೆ ದೀಪೂ. ಆಗ ಆಡಿದರೆ ಯಾವ ದೋಷವೂ ಇಲ್ಲವಂತೆ. ನಾನು ಚಿಕ್ಕವನಿದ್ದಾಗ ನಮ್ಮ ಹಿರಿಯರು ಕೂಡ ನಮಗೆ ಆಡಲು ರೂಪಾಯಿ–ಎಂಟಾಣೆ ಕೊಟ್ಟು ನಿಮ್ಮ ಅದೃಷ್ಟ ಪರೀಕ್ಷಿಸಿಕೊಳ್ಳಿ ಎಂದು ಹೇಳುತ್ತಿದ್ದರು' ಎಂದರು ಚಿಕ್ಕಪ್ಪ. 'ನಿಮ್ಮ ಹಿರಿಯರು ಮಾಡುತ್ತಿದ್ದ ತಪ್ಪಿನ ಫಲವನ್ನು ಈಗ ನಾನು ಅನುಭವಿಸಬೇಕಾಗಿದೆ. ನೀನೇ ಹೇಳು ದೀಪೂ ಇದೇನು ಒಳ್ಳೆಯ ಹವ್ಯಾಸವೇ? ಜೂಜಾಟದಿಂದ ಪಾಂಡವರು ರಾಜ್ಯವನ್ನೇ ಕಳೆದುಕೊಂಡರು. ನೀನಂತೂ ರಿಟಾಯರ್ ಮನುಷ್ಯ ಕಳೆದುಕೊಳ್ಳಲು ನಿನ್ನ ಹತ್ತಿರ ಏನಿದೆ?'

'ಯಾಕೆ? ನೀನಿರುವೆಯಲ್ಲ ಮಹಾರಾಣಿ. ನಿನ್ನನ್ನು ಯಾರಾದರೂ ಗೆದ್ದು ಕರೆದುಕೊಂಡು ಹೋದರೂ, ಈ ಪಿಡುಗನ್ನು ನೀವೇ ಇಟ್ಟುಕೊಳ್ಳಿ ಎಂದು ಮರುದಿನವೇ ವಾಪಸ್ ಕಳಿಸುತ್ತಾರೆ.'

ದೀಪಕನಿಗೆ ಅವರ ಪ್ರೇಮ ಕಲಹವನ್ನು ಕೇಳಿ ಸಂಕೋಚದಿಂದ ಅಲ್ಲಿ ಕೂಡಲಿಕ್ಕಾಗಲಿಲ್ಲ– 'ಚಿಕ್ಕಪ್ಪ, ನಾನು ಮಲಗಲು ಹೋಗಲೇ?' ಹೇಳಿದ. 'ಬೆಳಿಗ್ಗೆ ಬೇಗ ಎದ್ದು ಹೊರಟಿರುವಿ ನೀನು ಹೋಗು.' ಅವನು ತಟ್ಟೆಯನ್ನು ತೊಳೆದು ಯಥಾಸ್ಥಾನದಲ್ಲಿಟ್ಟು ತನ್ನ ರೂಮಿಗೆ ಹೋದ. ರೂಮು ವರಾಂಡಾದಲ್ಲಿದ್ದರೂ ಪತಿಪತ್ನಿಯರ ಹುಸಿ ಜಗಳ ಕೇಳಿಸುತ್ತಿತ್ತು. ಅದನ್ನು ಕೇಳಿ ಮೊದ ಮೊದಲು ಅವನಿಗೆ ಮುಜುಗರವಾಗುತ್ತಿತ್ತು. ಅವನ ಮನೆಯಲ್ಲಿ ಜಗಳವಾಗುತ್ತಿರಲಿಲ್ಲವೆಂದಲ್ಲ. ಆದರೆ ಅದು ಶೀತಲಯುದ್ಧ. ಅಮ್ಮ–ಅತ್ತಿಗೆಯರಲ್ಲಿ ನಡೆಯುತ್ತಿದ್ದ ಈ ಯುದ್ಧದ ಬಗ್ಗೆ ಅಣ್ಣ ಏನೂ ಮಾಡಲಾರದೇ ತ್ರಿಶಂಕುವಾಗಿ ಬಿಡುತ್ತಿದ್ದ. ಅಪ್ಪಅಮ್ಮರ ನಡುವೆಯೂ ಈ ತರಹದ ಹುಸಿಜಗಳ ಆಗುತ್ತಿತ್ತೋ ಏನೋ. ತಂದೆ ತೀರಿಕೊಂಡಾಗ ಅವನಿನ್ನೂ ಆರು ವರ್ಷದ ಬಾಲಕ. ಅವನಿಗೆ ಇಷ್ಟು ಮಾತ್ರ ನೆನಪಿದೆ– ಆ ಸಮಯ ಅವನಿಗೆ ಸುವರ್ಣ ಸಮಯವಾಗಿತ್ತು. ಅವನು ಅಕ್ಕ ಅಣ್ಣರ ಅನಂತರ ಹತ್ತು ವರ್ಷಗಳ ಅಂತರದಲ್ಲಿ ಹುಟ್ಟಿದ್ದ, ಚಿಕ್ಕವನೆಂದು ಅವನನ್ನು ಎಲ್ಲರೂ ತುಂಬ ಅಕ್ಕರೆಯಿಂದ ನೋಡುತ್ತಿದ್ದರು. ತಂದೆ ಅಕಸ್ಮಾತ್ ಹಾರ್ಟ್ ಅಟ್ಯಾಕಾಗಿ ತೀರಿಕೊಂಡ ಮೇಲೆ ಮನೆಯ ಪರಿಸ್ಥಿತಿಯೇ ಬದಲಾಗಿ